# ಸುರಕ್ಷಾ ಕ್ರಮ ಬಿಗಿಗೊಳಿಸುತ್ತಿರುವ ಬಿಪಿಒ ಉದ್ಯಮ

## ● ಪ್ರತಿ ಕ್ಯಾಬ್‌ನಲ್ಲಿಯೂ ಉದ್ಯೋಗಿಗಳೊಂದಿಗೆ ಭದ್ರತಾ ಸಿಬ್ಬಂದಿ ● ಪುರುಷರಿಗೆ ಕೊನೆಯಲ್ಲಿ ಡ್ರಾಪ್




ಐಟೀಇಎಸ್ ವೃತ್ತಿನಿರತರ ಸಂಘ ವಸಂತನಗರದಲ್ಲಿ ಏರ್ಪಡಿಸಿದ್ದ ಶ್ರದ್ಧಾಂಜಲಿಯಲ್ಲಿ ವಿವಿಧ ಕಾಲ್‌ಸೆಂಟರ್ ಸಿಬ್ಬಂದಿ.

ನವದೆಹಲಿ: ಕಾಲ್‌ಸೆಂಟರ್ ನೌಕರರ ಹಿತದೃಷ್ಟಿ ಕಾಪಾಡುವ ಸಲುವಾಗಿಯೇ ಅಸ್ತಿತ್ವಕ್ಕೆ ಬಂದಿರುವ ವೃತ್ತಿಪರರ ಒಕ್ಕೂಟ ಐಟಿಇಎಸ್. ಬಹುರಾಷ್ಟ್ರೀಯ ಕಂಪನಿಗಳು ನೌಕರರ ಭದ್ರತೆಗೆ ಪ್ರಮುಖ ಆದ್ಯತೆ ನೀಡಬೇಕೆಂಬ ಐಟಿಇಎಸ್‌ನ ಒತ್ತಾಸೆ. ಈ ಸಂಬಂಧ, ಮಾಹಿತಿ ತಂತ್ರಜ್ಞಾನ ಮತ್ತು ಮೊದಲಾದ ಕ್ಷೇತ್ರಗಳಲ್ಲಿ ಉದ್ಯೋಗಿಗಳ ಸುಗಮ ಸಂಚಾರಕ್ಕಾಗಿಯೇ ಅಧ್ಯಯನ ಕೈಗೊಳ್ಳಲು ಭಾರತೀಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಕ್ಕೆ ಮನವಿ ಮಾಡಿಕೊಳ್ಳಲು ಯುಎನ್‌ಐಟಿಇಎಸ್ ಯೋಚಿಸಿದೆ ಎಂದು ಪ್ರಧಾನ ಕಾರ್ಯದರ್ಶಿ ಶೇಖರ್ ಕಾರ್ತಿಕ್ ತಿಳಿಸಿದ್ದಾರೆ. ಪ್ರಸ್ತುತ, ದೇಶದ ವಿವಿಧ ಕಾಲ್‌ಸೆಂಟರ್ ಹಾಗೂ ಬಿಪಿಒಗಳಲ್ಲಿ ಕೆಲಸ ಮಾಡುವ ಸುಮಾರು 2000 ಉದ್ಯೋಗಿಗಳು ಐಟಿಇಎಸ್ ಸದಸ್ಯರಾಗಿದ್ದಾರೆ.

ಪಿಟಿಐ, ನವದೆಹಲಿ: ಬೆಂಗಳೂರಿನಲ್ಲಿ ಕಳೆದ ಮಂಗಳವಾರ ರಾತ್ರಿ ಕಾಲ್‌ಸೆಂಟರ್ ಉದ್ಯೋಗಿ ಪ್ರತಿಭಾ ಅವರ ಕೊಲೆ ಪ್ರಕರಣದ ಬಳಿಕ ಬಿಪಿಒ ಉದ್ಯಮ ಎಚ್ಚರಗೊಂಡಿದ್ದು, ತಮ್ಮ ಉದ್ಯೋಗಿಗಳ ಸುರಕ್ಷಾ ವ್ಯವಸ್ಥೆಗಳನ್ನು ಪರಿಶೀಲಿಸುತ್ತಿವೆ.

ವಾಹನ ಚಾಲಕರನ್ನು ನೇಮಕ ಮಾಡುವಾಗ ಅವರ ಹಿನ್ನೆಲೆ, ತರಬೇತಿ ಕುರಿತು ಪೂರ್ಣ ಮಾಹಿತಿ ಪಡೆದು ಸಂದರ್ಶನ ಮಾಡಿಯೇ ನೇಮಿಸುತ್ತೇವೆ. ಸಂಸ್ಥೆಯ ಉದ್ಯೋಗಿಗಳಿಗೆ ಯಾವುದೇ ಸಮಯದಲ್ಲಿ ಕರೆ ಮಾಡಿ ಮಾಹಿತಿ ಪಡೆಯಲು ದಿನದ 24 ಗಂಟೆಯೂ ಸಂಚಾರಿ ಹೆಲ್ಪ್‌ಡೆಸ್ಕ್ ಲಭ್ಯವಿದೆ. ಕಂಪನಿ ಕ್ಯಾಬ್‌ಗಳಲ್ಲಿ ಸಂಪರ್ಕಕ್ಕಾಗಿ ರೇಡಿಯೋ ವ್ಯವಸ್ಥೆಯೂ ಇದೆ ಎಂದು ವಿಪ್ರೋ ಬಿಪಿಒ ಸಂಸ್ಥೆ ವಿವರಣೆ ನೀಡಿದೆ.

ಪ್ರತಿ ಕ್ಯಾಬ್‌ನಲ್ಲಿಯೂ ಉದ್ಯೋಗಿಗಳೊಂದಿಗೆ ಭದ್ರತಾ ಸಿಬ್ಬಂದಿ ಇರುತ್ತಾರೆ. ಕೆಲವು ಕ್ಯಾಬ್‌ಗಳಲ್ಲಿ ಮಹಿಳಾ ಸಿಬ್ಬಂದಿಯೂ ಇರುತ್ತಾರೆ. ಮೊದಲು ಕ್ಯಾಬ್ ಏರುವ ಹಾಗೂ ಕೊನೆಗೆ ಕ್ಯಾಬ್‌ನಿಂದ ಇಳಿಯುವ ವ್ಯಕ್ತಿ ಪುರುಷನೇ ಆಗಿರಬೇಕೆಂದು ಎಚ್ಚರಿಕೆ ವಹಿಸಲಾಗಿದೆ ಎನ್ನುತ್ತಾರೆ ವಿಪ್ರೊ ಬಿಪಿಒದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಟಿ.ಕೆ.ಕುರಿಯನ್.

■ **ಚಾಲಕರೊಂದಿಗೆ ಆತ್ಮೀಯತೆ ಬೇಡ:** ಭದ್ರತಾ ಸಿಬ್ಬಂದಿ ಇದ್ದರೆ ಮಾನಸಿಕವಾಗಿ ಭದ್ರತೆ ಇರುತ್ತದೆ ಎಂದು ಅಮೆರಿಕನ್ ಎಕ್ಸ್ ಪ್ರೆಸ್‌ನ ಹಿರಿಯ ಉದ್ಯೋಗಿ ಹೇಳುತ್ತಾರಾದರೂ, ಕನ್‌ವರ್ಜೀಸ್ ಸಂಸ್ಥೆಯ ಉದ್ಯೋಗಿಯೊಬ್ಬಾಕೆ, 'ಭದ್ರತಾ ಸಿಬ್ಬಂದಿಯನ್ನೂ ನಂಬುವಂತಿಲ್ಲ' ಎನ್ನುತ್ತಾರೆ. ಚಾಲಕರೊಂದಿಗೆ ಬಹಳ ಆತ್ಮೀಯವಾಗಿ ವರ್ತಿಸಬಾರದು ಎಂಬ ಎಚ್ಚರಿಕೆಯನ್ನೂ ನೀಡಲಾಗುತ್ತಿದೆ.

ಕ್ಯಾಬ್ ಹತ್ತುವ ಮುನ್ನ ಸಂಸ್ಥೆಗಳ ಸ್ಟಿಕರ್ ಹಾಗೂ ಚಾಲಕರ ಗುರುತು ಚೀಟಿಯನ್ನು ಗುರುತಿಸಬೇಕು. ದಾರಿಮಧ್ಯದಲ್ಲಿ ಅಪರಿಚಿತರನ್ನು ಕ್ಯಾಬ್‌ಗೆ ಹತ್ತಿಸಿಕೊಳ್ಳಬಾರದು ಎಂದು ನಿಯಮವಿದ್ದರೂ ಅಪರಿಚಿತರನ್ನು ಕರೆದುಕೊಳ್ಳುವುದು ನಡೆದೇ ಇದೆ. ಇದು ಸಂಸ್ಥೆಗೆ ವರದಿಯಾಗುವುದೂ ಇಲ್ಲ ಎಂಬುದು ಸಂಸ್ಥೆಗಳ ದೂರು.

ಪೊಲೀಸರೂ ನಿಯಮಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿದ್ದೇವೆ ಎನ್ನುತ್ತಾರೆ. ಚಾಲಕರ ಭಾವಚಿತ್ರ, ಬೆರಳಚ್ಚುಗಳನ್ನು ದಾಖಲಿಸಿಕೊಳ್ಳಲಾಗುತ್ತದೆ. ಅವರ ವಿಶ್ವಾಸಾರ್ಹತೆ ಪರೀಕ್ಷಿಸಲು ಕೆಲವು ದಿನಗಳಿಂದ 2–3 ವಾರಗಳಾದರೂ ಬೇಕಾಗುತ್ತದೆ ಎನ್ನುತ್ತಾರೆ ಗುರ್ಗಾಂವ್ ಪೊಲೀಸ್ ಅಧಿಕಾರಿ ಹನೀಫ್ ಕುರೇಶಿ.

ಇದು ಬಿಪಿಒ ಕಂಪನಿಗಳು ಮಾಡಿರುವ ಆಯ್ಕೆಯಾದರೂ ಈ ಆ ವೇಳೆಯ ಕೆಲಸ ವೃತ್ತಿಸಂಬಂಧಿ ತೊಂದರೆ ಎಂಬುದು ಉದ್ಯೋಗಿಯೊಬ್ಬರ ಅಭಿಪ್ರಾಯ. ನಾಸ್ಕಾಮ್ ಅಧ್ಯಕ್ಷ ಕಿರಣ್ ಕಾರ್ಣಿಕ್, ಈ ಘಟನೆಯಿಂದ ನಾವು ಪಾಠ ಕಲಿಯಬೇಕು. ಉದ್ಯೋಗಿಗಳ ಸುರಕ್ಷತೆಗೆ ಗರಿಷ್ಠ ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಸಿದ್ದಾರೆ. 17 ಬಿಲಿಯನ್ ಅಮೆರಿಕನ್ ಡಾಲರ್ ಆದಾಯವುಳ್ಳ ಬಿಪಿಒ ಉದ್ಯಮದ ಉದ್ಯೋಗಿಗಳು ಈ ಘಟನೆಯಿಂದ ತತ್ತರಿಸಿದ್ದಾರೆ. ಉದ್ಯಮಿಗಳೂ ನಿಗಾವಹಿಸಿರುವುದು ಧನಾತ್ಮಕ ಬೆಳವಣಿಗೆ.

# ನೌಕರರಿಗೆ ಅಗತ್ಯ ಭದ್ರತೆ: ಎಚ್‌ಪಿ

ಬೆಂಗಳೂರು: ಕಾಲ್ ಸೆಂಟರ್ ಉದ್ಯೋಗಿ ಪ್ರತಿಭಾ ಕೊಲೆ ಪ್ರಕರಣ ಪತ್ತೆಯಾದ ಎರಡು ದಿನಗಳ ನಂತರ ಆಕೆ ಉದ್ಯೋಗಿಯಾಗಿದ್ದ ಹ್ಯೂಲೆಟ್ ಪ್ಯಾಕರ್ಡ್ (ಎಚ್‌ಪಿ) ಕಂಪನಿ ತನ್ನ ಉದ್ಯೋಗಿಗಳಿಗೆ ವಿಶೇಷವಾಗಿ ರಾತ್ರಿ ಪಾಳಿ ನೌಕರರಿಗೆ ಬಿಗಿ ಭದ್ರತೆ ಒದಗಿಸುವ ಭರವಸೆ ನೀಡಿದೆ.

ಎಚ್‌ಪಿ ಕಂಪನಿ ಸಂವಹನ ಮತ್ತು ಗ್ರಾಹಕ ವ್ಯವಹಾರಗಳ ಅಧಿಕಾರಿ ಅಮಿತ್ ಸರ್ಕಾರ್ ಅವರು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ, ಇಂತಹ ದಾರುಣ ಘಟನೆಯೊಂದು ನಡೆದಿರುವುದು ಇದೇ ಮೊದಲ ಬಾರಿಯಾಗಿದೆ. ಕಂಪನಿ ಈ ಕೃತ್ಯವನ್ನು ಕಟುವಾಗಿ ಖಂಡಿಸುತ್ತದೆ. ಯಾವುದೇ ಜೀವಹಾನಿ ದೊಡ್ಡ ದುರಂತವೇ ಸರಿ. ನಮ್ಮ ಸಹೋದ್ಯೋಗಿಯೊಬ್ಬರನ್ನು ಕಳೆದುಕೊಳ್ಳುವುದು ನಮ್ಮ ಕಂಪನಿಗೆ ಇನ್ನೂ ದೊಡ್ಡ ದುರಂತ ಎಂದು ಅವರು ಹೇಳಿದ್ದಾರೆ.

■ **ತನಿಖಾಧಿಕಾರಿಗಳಿಗೆ ಸಹಾಯ:** ಕೊಲೆ ಪ್ರಕರಣದಲ್ಲಿ ತನಿಖಾಧಿಕಾರಿಗಳಿಗೆ ಎಲ್ಲ ರೀತಿಯ ನೆರವು ನೀಡಲಾಗುವುದು ಮತ್ತು ಅಗತ್ಯ ಸಂದರ್ಭಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ಪ್ರತಿಭಾ ಪ್ರಕರಣದಲ್ಲಿ ಕಾರಿನ ಚಾಲಕ ತಕ್ಷಣ ಬದಲಿ ಕಾರಿನಲ್ಲಿ ಪ್ರತಿಭಾ ಆಗಮಿಸುತ್ತಿರುವ ಬಗ್ಗೆ ಮಾಹಿತಿ ನೀಡಲಿಲ್ಲ. ಹೀಗಾಗಿ ಉದ್ಯೋಗಿಯ ಮೇಲಿನ ಅಧಿಕಾರಿಗೆ ತಕ್ಷಣ ಮಾಹಿತಿ ಲಭ್ಯವಾಗಿಲ್ಲ. ಯಾವಾಗಲೂ ಶೇ.15ರಿಂದ 20ರಷ್ಟು ಉದ್ಯೋಗಿಗಳು ಗೈರು ಹಾಜರಿರುತ್ತಾರೆ. ಒಬ್ಬ ಉದ್ಯೋಗಿ ಕೆಲಸಕ್ಕೆ ಹಾಜರಾಗದಿದ್ದುದು ಅನುಮಾನಕ್ಕೆ ಎಡೆ ಮಾಡಲಿಲ್ಲ ಎಂದು ತಿಳಿಸಿದ್ದಾರೆ.